ANNEXURE-IV

Details of workwise Expenditure under Flood Damage (M&I) for the year 1989-90. (Funds released by Z.P.)

Zilla Parishad Engineering Division, Belgaum)

Sl. No.	Name of Work	Taluka	Expenditure incurred during 1989-90 Amount.
1	2	3	4
1.	Repairs to M.I. Tank at S.No.62 of Kangrali	Belgaum	0.62
2.	Repairs to M.I. Tank at S.No. 723 dt: Majagaon.	-do-	0.11
3.	Repairs to M.I. Tank at Bolakadbi	Saundatti	0.43
4.	Repairs to M.I. Tank at Hosur	Ramdurga	0.36
5.	Repairs to M.I. Tank at Wat Wair Channel	-do-	0.32
6.	Rep. to C.D.M.I. Tank at Godachi	-do-	0.45
7.	Rep. to B.W. Toewall and App. Rd. to M.I. Tank at Godachi	-do-	0.64
8.	Rep. to Flood damage to M.I. Tank at Pur villages.	Khanapur	0.02
9.	Rep. to M.I. Tank S.No. 43 Near Navage.	-do-	0.07
10.	-do- S.No. 49	-do-	0.04
11.	Rep. to Barriage across Pandhari river near Kapoli.	-do-	0.13
Total			3.19

ಕೈಗಾರಿಕಾ ಜಮೀನು ಅಥವಾ ನಿವೇಶನ ಪರಿವರ್ತನೆಗಳ ಅನುಮತಿ ಕೋರಿಕೆ

1834 - ಕೆ. ಲಕ್ಷ್ಮಣ (ರಾಜಾಜಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಗಾರಿಕಾ ಜಮೀನು ಅಥವಾ ನಿವೇಶನ ವಿಂಗಡಣೆಗಾಗಿ ಭೂ ಪರಿವರ್ತನೆಗೆ ಅನುಮತಿ ಕೋರಿ ಬೆಂಗಳೂರು ನಗರ ಜಿಲ್ಲಾಧಿಕಾರಿಯವರಿಗೆ 1990ರ ಜನವರಿ ತಿಂಗಳಿಂದ 1991ರ ಜನವರಿ ತಿಂಗಳವರೆಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಆ ಪೈಕಿ ವಿಲೇವಾರಿಯಾದ ಅರ್ಜಿಗಳೆಷ್ಟು?

ಇ) ಉಳಿದವು ವಿಲೇವಾರಿಯಾಗದಿರುವುದಕ್ಕೆ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ವಾಸೋಪಯೋಗಕ್ಕಾಗಿ 363

ಕೈಗಾರಿಕೆಯ ಉಪಯೋಗಕ್ಕಾಗಿ 30

ಒಟ್ಟು 393

ಆ) 393

ಇ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ಅಕ್ರಮ ಮಾಡಿಕೊಂಡಿರುವ ಬಗ್ಗೆ

2882 - ಶ್ರೀಮತಿ ಸುಮಾವಸಂತ (ವಿರಾಜಪೇಟೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕಳೆದ 20-25ವರ್ಷಗಳಿಂದ ಕಡುಬಡವರು ಹಿಂದುಳಿದವರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನರು ಅರಣ್ಯ ಭೂಮಿಯನ್ನು ಅಕ್ರಮ ಮಾಡಿಕೊಂಡು ಸಾಗುವಳಿ ಮಾಡುತ್ತಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಆ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) ಹೌದು

ಆ) ದಿನಾಂಕ 27-1-78ರ ಪೂರ್ವದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಭೂರಹಿತ ಕೃಷಿ ಕಾರ್ಮಿಕರಿಂದಾದ 3 ಎಕರೆಗೆ ಮೀರದಂತೆ ಅರಣ್ಯ ಪ್ರದೇಶ ಅತಿಕ್ರಮಣಗಳನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿಯ ನಂತರ ಸಕ್ರಮಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಅನ್ವಯಿಸುವುದಿಲ್ಲ.

ತಾಲ್ಲೂಕುಗಳನ್ನು ಜಿಲ್ಲಾ ಕೇಂದ್ರಗಳನ್ನಾಗಿ ಪರಿವರ್ತಿಸುವ ಬಗ್ಗೆ

2320 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನೇಕ ತಾಲ್ಲೂಕುಗಳನ್ನು ಜಿಲ್ಲಾ ಕೇಂದ್ರಗಳನ್ನಾಗಿ ಪರಿವರ್ತಿಸಲು ಸರ್ಕಾರದ ನಿರ್ಧಾರಗಳೇನು?

ಆ) ಜಿಲ್ಲಾ ಕೇಂದ್ರಗಳನ್ನಾಗಿ ಪರಿವರ್ತಿಸಲು ತೀರ್ಮಾನವನ್ನು ಯಾವಾಗ ಕೈಗೊಳ್ಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಇದು ಸರ್ಕಾರದ ತೀರ್ವ ಪರಿಶೀಲನೆಯಲ್ಲಿದೆ.

ಆ) ಪರಿಶೀಲನೆಯಲ್ಲಿ ಇರುವುದರಿಂದ ಖಚಿತವಾಗಿ ಯಾವಾಗ ತೀರ್ಮಾನ ಕೈಗೊಳ್ಳುತ್ತೇನೆ ಎಂದು ಹೇಳಲು ಸಾಧ್ಯವಾಗಲಾರದು.